# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂಫೈಎಸ್-368/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 20/11/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಬಾಬಾನಂದ, ಪೆರ್ಡೂರು ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಬಾಬಾನಂದ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ತಾನು ಶ್ರೀಮತಿ ಸುನಂದ ಇವರನ್ನು 1993ರಲ್ಲಿ ಮದುವೆ ಆಗಿದ್ದು, ಮದುವೆಯ ನಂತರ ತಾನು ಮುಂಬೈನಲ್ಲಿ ಉದ್ಯೋಗ ನಿಮಿತ್ತ ಇದ್ದೇನೆಂದು, 2009ನೇ ಇಸವಿಯಲ್ಲಿ ರೈಲ್ವೆ ಅಪಘಾತದಲ್ಲಿ ಮರಣ ಹೊಂದಿದ್ದ ಯಾವುದೋ ವ್ಯಕ್ತಿ ಶವವನ್ನು ದೂರುದಾರರೆ ಮರಣ ಹೊಂದಿರುತ್ತಾರೆಂದು ಹೇಳಿ ತಮ್ಮ ಪತ್ನಿಯು ಶವವನ್ನು ತಮ್ಮ ವಶಕ್ಕೆ ಪಡೆದು ದೂರುದಾರರ ಮರಣ ಪ್ರಮಾಣ ಪತ್ರವನ್ನು ಸೃಷ್ಟಿಸಿ ದೂರುದಾರರ ಹೆಸರಿನಲ್ಲಿದ್ದ ಜಾಗದ ಪಹಣಿಯನ್ನು ದೂರುದಾರರ ಪತ್ನಿ ಮತ್ತು ಆಕೆಯ ಮಕ್ಕಳ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ. ವಿಷಯ ತಿಳಿದ ದೂರುದಾರರು ಊರಿಗೆ ಮರಳಿ ಬಂದು ಸಹಾಯಕ ಕಮೀಷನರ್ ಮುಂದೆ ಸದರಿ ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಸಹಾಯಕ ಕಮೀಷನರ್/ಉಪವಿಭಾಗಾಧಿಕಾರಿಯವರ ಆದೇಶದಂತೆ ದೂರುದಾರರ ಹೆಸರಿನಲ್ಲಿ ಕಂದಾಯ ದಾಖಲೆಗಳನ್ನು ಹಾಗೂ ಪಹಣಿ ಪತ್ರಿಕೆಯನ್ನು ಮ್ಯೂಟೇಷನ್ ಮಾಡಲಾಗಿರುತ್ತದೆ. ಈ ಹಂತದಲ್ಲಿ ದೂರುದಾರರ ಪತ್ನಿ ಶ್ರೀಮತಿ ಸುನಂದ ಮತ್ತು ಮಕ್ಕಳು ಜೀವನಾಂಶ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಶ್ರೀಮತಿ ಸುನಂದ ಹಾಗೂ ಮಗ ಇಬ್ಬರಿಗೂ ತಿಂಗಳೊಂದಕ್ಕೆ ತಲಾ ರೂ.750/- ರಂತೆ ಜೀವನಾಂಶಕ್ಕೆ ಆದೇಶವಾಗಿರುತ್ತದೆ. ಸದರಿ ಆದೇಶದ ವಿರುದ್ಧ ದೂರುದಾರರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆಂದು, ಅದು ವಿಲೇಗೆ ಬಾಕಿ ಇರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ದೂರುದಾರರು ವಿವಾಹ ವಿಚ್ಛೇದನ ಕೋರಿ ಪ್ರಕರಣವನ್ನು ನ್ಯಾಯಾಲಯದಲ್ಲಿ ದಾಖಲಿಸಿದ್ದು, ಅದು ಸಹ ವಿಲೇಗೆ ಬಾಕಿ ಇರುತ್ತದೆ ಎಂದು ತಿಳಿಸಿರುತ್ತಾರೆ. ದಿ:11/03/2013 ರಂದು

ಪೆರಡೂರು ಪಂಚಾಯತಿಗೆ ಅರ್ಜಿ ಸಲ್ಲಿಸಿ ಶ್ರೀಮತಿ ಸುನಂದ ರವರು ಡೋರ್ ನಂ.2–44ಸಿಯ ಮನೆಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ. ಇದಕ್ಕೆ 1ನೇ ಎದುರುದಾರರಾದ ಪೆರಡೂರು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರು ಸಹಕರಿಸಿರುತ್ತಾರೆ. ಸದರಿ ಮನೆಯನ್ನು ತಮ್ಮ ಹೆಸರಿಗೆ ಮಾಡಿಕೊಳ್ಳಲು ಸುಳ್ಳು ದಾಖಲೆಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಪಡೆದುಕೊಂಡಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಹಾಗೂ ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಈ ಹಂತದಲ್ಲಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಪೆರಡೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಯಿತ್ತ್ಯಾರು ದರ್ಖಾಸು ಮನೆ ಎಂಬಲ್ಲಿರುವ ಕಟ್ಟಡ ಸಂ:2–44(1)ರ ಕಟ್ಟಡವು ಗ್ರಾಮ ಪಂಚಾಯತಿಯ ದಾಖಲೆ ಪ್ರಕಾರ ದಿ:02/10/2013 ರವರೆಗೆ ಶ್ರೀ ಬಾಬಾನಂದ ಇವರ ಹೆಸರಿನಲ್ಲಿ ಇತ್ತೆಂದು ನಂತರ ದಿ:11/03/2013 ರಂದು ದೂರುದಾರರ ಪತ್ನಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಅರ್ಜಿ ನೀಡಿ ಅದರಲ್ಲಿ ತಾವು ಪೆರಡೂರು ಗ್ರಾಮದ ಸರ್ವೇ ನಂಬರ್ 255 ರಲ್ಲಿ ಇರುವ ಕಟ್ಟಡ ಸಂ:2–44ಸಿ ಯಲ್ಲಿರುವ ಮನೆಯಲ್ಲಿ ತಾವು ಸುಮಾರು 20 ವರ್ಷಗಳಿಂದಲೂ ಖಾಯಂ ಆಗಿ ವಾಸಿಸುತ್ತಿದ್ದು, ತಮ್ಮ ಪತಿಯಾದ ಬಾಬನಂದ ರವರು ಉದ್ಯೋಗ ನಿಮಿತ್ತ ಬೇರೆ ಊರಿಗೆ ಹೋಗಬೇಕಾಗುತ್ತಿದ್ದು, ಪದೇ ಪದೇ ಬರಲು ಅನುಕೂಲವಾಗದೇ ಇರುವುದರಿಂದ, ಸದರಿ ಸರ್ವೇ ನಂಬರ್ 255ರಲ್ಲಿ ಇರುವ ಕಟ್ಟಡದ ಖಾತೆಯನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ದಿ:28/05/2013 ರಂದು ಗ್ರಾಮ ಪಂಚಯತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ನೀನಂ6/19/2013–14 ರಂತೆ ಖಾತೆಯನ್ನು ಶ್ರೀಮತಿ ಸುನಂದ ಇವರ ಹೆಸರಿಗೆ ಬದಲಾವಣೆ ಮಾಡಲಾಗಿರುತ್ತದೆ ಎಂದು ಆದ್ದರಿಂದ ಪಂಚಾಯತಿ ನಿರ್ಣಯದಂತೆ ಖಾತೆ ಬದಲಾವಣೆ ಮಾಡಲಾಗಿರುತ್ತದೆಯೇ ಹೊರತು ಯಾವುದೇ ದುರುದ್ದೇಶದಿಂದ ಮಾಡಿರುವುದಿಲ್ಲ ಹಾಗೂ ಈ ಸಂಬಂಧ ತಾವು ಯಾವುದೇ ದಾಖಲೆಯನ್ನು ಸೃಷ್ಟಿಸಿರುವುದಿಲ್ಲ. ಸದರಿ ಕಟ್ಟಡದ ದಾಖಲೆಯು ಶ್ರೀಮತಿ ಸುನಂದ ಇವರ ಹೆಸರಿಗೆ ಬದಲಾವಣೆಯಾಗಿರುವುದನ್ನು ತಿಳಿದು ದೂರುದಾರರು ಅರ್ಜಿ ನೀಡಿ ತನ್ನ ಹೆಸರಿಗೆ ಮೇಲೆ ಹೇಳಿದ ಆಸ್ತಿಯ ಖಾತೆ ಬದಲಾವಣೆ ಮಾಡಿಕೊಡಬೇಕೆಂದು ತಮ್ಮ ಕಛೇರಿಗೆ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ತಾವು ಸ್ಥಳಕ್ಕೆ ಭೇಟಿ ನೀಡಿ

ಪರಿಶೀಲಿಸಲಾಗಿ, ಒಂದು ಕಟ್ಟಡ ಬಿದ್ದು ಹೋಗಿದ್ದ ಕುರುಹು ಕಂಡು ಬಂದಿದ್ದು, ಸದರಿ ಸ್ಥಳದ ಪಕ್ಕದಲ್ಲಿ ಶ್ರೀಮತಿ ಸುನಂದ ರವರು ವಾಸವಾಗಿರುವ ಹೊಸ ಮನೆ ಇರುವುದು ಕಂಡು ಬಂದಿರುತ್ತದೆ ಎಂದು ಅದರಂತೆ, ದೂರುದಾರರ ಅರ್ಜಿಯನ್ನು ದಿ:16/09/2015 ರ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದ್ದು, ಸಾಮಾನ್ಯ ಸಭೆಗೆ ನಿರ್ಣಯ ಸಂಖ್ಯೆ:34(21)/15-16 ರಂತೆ ಶ್ರೀ ಬಾಬನಂದ ಇವರು ಖಾತಾ ಬದಲಾವಣೆ ಕುರಿತು ಕೋರಿರುವ ಕಟ್ಟಡವು ಸರ್ವೇ ನಂ.255ರಲ್ಲಿ ಇರುವ ಬಗ್ಗೆ ಭೂಮಾಪನ ಇಲಾಖೆಯಿಂದ ದೃಢೀಕರಿಸಿದ ನಕ್ಷೆಯನ್ನು ನೀಡಿದಲ್ಲಿ ಪರಿಶೀಲಿಸಲಾಗುವುದೆಂದು ಸಭೆಯಲ್ಲಿ ನಿರ್ಣಯಿಸಿ, ನಿರ್ಣಯವನ್ನು ಲಿಖಿತವಾಗಿ ಶ್ರೀ ಬಾಬನಂದ/ದೂರುದಾರರಿಗೆ ತಿಳಿಸಲಾಗಿತ್ತು. ಆದರೆ, ದೂರುದಾರರು ಯಾವುದೇ ನಕ್ಷೆಯನ್ನಾಗಲೀ ಅಥವಾ ಮಾಹಿತಿಯನ್ನಾಗಲೀ ತಮ್ಮ ಕಛೇರಿಗೆ ನೀಡದ ಕಾರಣ, ತಾವು ವರ್ಗಾವಣೆ ಆಗುವವರೆಗೆ ಯಾವುದೇ ಕ್ರಮ ಜರುಗಿಸಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ತಾವು ಯಾವುದೇ ರೀತಿಯ ಕರ್ತವ್ಯಲೋಪವೆಸಗಿಲ್ಲವೆಂದು ತಿಳಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆಯನ್ನು ದೂರುದಾರರಿಗೆ ರವಾನಿಸಿ ಅವರಿಂದ ಆಕ್ಷೇಪಣೆಯನ್ನು ಪಡೆಯಲಾಗಿರುತ್ತದೆ. ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, 1ನೇ ಎದುರುದಾರರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ದಾಖಲೆಯನ್ನು ಸರಿಯಾಗಿ ಪರಿಶೀಲಿಸದೇ ಶ್ರೀಮತಿ ಸುನಂದ ಇವರ ಹೆಸರಿಗೆ ಖಾತೆಯನ್ನು ಬದಲಾಯಿಸಿರುತ್ತಾರೆಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಪೆರಡೂರು ಗ್ರಾಮದ ಕೋಯಿತ್ತ್ಯಾರು ದರ್ಖಾಸು ಮನೆ ಎಂಬಲ್ಲಿರುವ ಕಟ್ಟಡ ಸಂಖ್ಯೆ:2-44(1)ರ ಕಟ್ಟಡವು ಗ್ರಾಮ ಪಂಚಾಯತಿ ದಾಖಲೆ ಪ್ರಕಾರ ಸದರಿ ಕಟ್ಟಡದ ಮನೆಯು ಸರ್ವೇ ನಂ.255ರಲ್ಲಿ ಇದ್ದ ಕಟ್ಟಡ ಸಂಖ್ಯೆ:2-44(1)ರ ಕಟ್ಟಡವು ದಿ:11/03/2013ರ ಪೂರ್ವದಲ್ಲಿ ಪ್ರಕರಣದ ದೂರುದಾರರಾದ ಶ್ರೀ ಬಾಬಾನಂದ ರವರ ಹೆಸರಿನಲ್ಲಿ ಇತ್ತೆಂದು ನಂತರ ಸದರಿ ಕಟ್ಟಡ ಖಾತೆಯನ್ನು ದೂರುದಾರರ ಪತ್ನಿ ನೀಡಿದ ಅರ್ಜಿಯ ಮೇರೆಗೆ ದೂರುದಾರರ ಪತ್ನಿಯ ಹೆಸರಿಗೆ ಖಾತೆ ಬದಲಾವಣೆ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಖಾತೆ ಬದಲಾವಣೆ ಕೋರಿ ದೂರುದಾರರ ಪತ್ನಿಯು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಮೇಲೆ ತೆಗೆದುಕೊಳ್ಳಲಾದ ಗ್ರಾಮ ಪಂಚಾಯತಿಯ ನಿರ್ಣಯವನ್ನು ಹಾಜರುಪಡಿಸಲಾಗಿದೆ. ಸಧರಿ ಪಂಚಾಯತಿ ನಿರ್ಣಯವನ್ನು ಪರಿಶೀಲಿಸಿದಲ್ಲಿ, ಶ್ರೀಮತಿ ಸುನಂದ ಇವರು ತನ್ನ ಪತಿ ಶ್ರೀ ಬಾಬಾನಂದರವರು ಉದ್ಯೋಗದ ನಿಮಿತ್ತ ಬೇರೆ ಊರಿಗೆ ಹೋಗಬೇಕಾದ ಅನಿವಾರ್ಯವಾದ ಕಾರಣ ಪದೇ ಪದೇ ಸದರಿಯವರು ಗ್ರಾಮ ಪಂಚಾಯತಿ ಕಛೇರಿಗೆ ಬರಲು ಅನಾನುಕೂಲವಿರುವುದರಿಂದ, ತನ್ನ ಹೆಸರಿಗೆ ಕಟ್ಟಡದ ಖಾತೆ

ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ. ಸದರಿ ಅರ್ಜಿಯನ್ನು ಹಾಜರುಪಡಿಸಲಾಗಿದೆ. ಆದ್ದರಿಂದ, ಸದರಿ ಅರ್ಜಿಯಲ್ಲಿ ದೂರುದಾರರು ಮೃತಪಟ್ಟಿರುತ್ತಾರೆಂಬ ಆಧಾರದ ಮೇಲೆ ಖಾತೆ ಬದಲಾವಣೆ ಕೋರಿರುವುದು ಕಂಡು ಬರುವುದಿಲ್ಲ. ಆದರೆ, ದೂರುದಾರರ ಪತ್ನಿ ಅರ್ಜಿಯೊಂದಿಗೆ ಶ್ರೀ ಬಾಬಾನಂದ ರವರು ಒಪ್ಪಿಗೆ ಪತ್ರ ನೀಡಿರುವ ಬಗ್ಗೆ ಛಾಪಾ ಕಾಗದದ ಮೇಲಿನ ಒಪ್ಪಿಗೆ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಶ್ರೀ ಬಾಬಾನಂದ ರವರು ತಾನು ಉದ್ಯೋಗ ನಿಮಿತ್ತ ಪರ ಊರಿಗೆ ಹೋಗುತ್ತಿದ್ದು, ತನ್ನ ಪತ್ನಿ ಮತ್ತು ಮಕ್ಕಳು ಸರ್ವೇ ನಂಬರ್ 255 ರಲ್ಲಿನ ಮನೆ ನಂಬರ್ 2-44ಸಿ ಯ ಮನೆಯಲ್ಲಿ ವಾಸವಿರುತ್ತಾರೆ, ಈಮನೆಯ ಖಾತೆಯನ್ನು ತನ್ನ ಪತ್ನಿ ಶ್ರೀಮತಿ ಸುನಂದ ಭಂಡಾರ್ತಿ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ತಮ್ಮ ಸಂಪೂರ್ಣ ಒಪ್ಪಿಗೆ ಇರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ. ಸದರಿ ಒಪ್ಪಿಗೆ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಒಪ್ಪಿಗೆ ಪತ್ರದ ಆಧಾರದ ಮೇಲೆ ಶ್ರೀಮತಿ ಸುನಂದ ಇವರ ಹೆಸರಿನಲ್ಲಿ ಮೇಲೆ ಹೇಳಿದ ಕಟ್ಟಡದ ಮನೆಯ ಖಾತೆಯನ್ನು ಶ್ರೀಮತಿ ಸುನಂದ ಹಾಗೂ ಅವರ ಮಕ್ಕಳ ಹೆಸರಿಗೆ ಬದಲಾವಣೆ ಮಾಡಿರುವುದು ಕಂಡು ಬರುತ್ತದೆ. ಸದರಿ ಒಪ್ಪಿಗೆ ಪತ್ರದ ಪ್ರತಿಯಲ್ಲಿರುವ ಶ್ರೀ ಬಾಬಾನಂದ ಇವರ ಸಹಿಯನ್ನು ಈ ಇಲಾಖೆಗೆ ಸಲ್ಲಿಸಿರುವ ಫಾರಂ ನಂ.1 ಮತ್ತು 2 ರಲ್ಲಿ ಸಹಿಗಳಿಗೆ ಹೋಲಿಕೆಯಾಗುತ್ತಿರುವುದು ಕಂಡು ಬರುತ್ತದೆ. ಅದರಂತೆ, ಪಂಚಾಯತಿ ವತಿಯಿಂದ ಖಾತೆ ಬದಲಾವಣೆ ಮಾಡಿರುವುದು ಸಹ ಕಂಡು ಬರುತ್ತದೆ. ಆದ್ದರಿಂದ, ಈ ರೀತಿ ಬದಲಾವಣೆಯಾದ ಹಕ್ಕನ್ನು ದೂರುದಾರರು ಸಲ್ಲಿಸಿದ ಅರ್ಜಿಯ ಮೇರೆಗೆ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ: 34(21)/15-16 ರಂತೆ ಶ್ರೀ ಬಾಬಾನಂದ ಇವರು ಖಾತ ಬದಲಾವಣೆ ಕೋರಿರುವ ಕಟ್ಟಡದ ಭೂಮಾಪನ ಇಲಾಖೆಯಿಂದ ಪಡೆದ ನಕ್ಷೆಯನ್ನು ಹಾಜರುಪಡಿಸಲು ಅರ್ಜಿದಾರರಿಗೆ ತಿಳಿಸಿರುವಂತೆ ಸೂಚಿಸಲಾಗಿದ್ದು, ಅದರಂತೆ ಶ್ರೀ ಬಾಬಾನಂದ ರವರಿಗೆ ಭೂಮಾಪನ ಇಲಾಖೆಯಿಂದ ಪಡೆದ ದೃಡೀಕೃತ ನಕ್ಷೆಯನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಶ್ರೀ ಬಾಬಾನಂದರವರು (ದೂರುದಾರರು) ಯಾವುದೇ ನಕ್ಷೆ ಅಥವಾ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ. ನಂತರ ದಿ:22/01/2016 ರಂದು ತಾನು ಪೆರಡೂರು ಗ್ರಾಮ ಪಂಚಾಯತಿಯಿಂದ ತೆಂಕನಿಡಿಯೂರು ಗ್ರಾಮ ಪಂಚಾಯತಿಗೆ ವರ್ಗಾವಣೆ ಆಗಿರುತ್ತೇನೆಂದು ತಿಳಿಸಿರುವುದನ್ನು ಪರಿಶೀಲಿಸಿದಲ್ಲಿ ಎದುರುದಾರರು ದೂರುದಾರರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡುವ ವಿಚಾರದಲ್ಲಿ, ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಲು ಬರುವುದಿಲ್ಲ. ಇದಲ್ಲದೇ ಎದುರುದಾರರು ಸ್ಥಳ ಪರಿಶೀಲನೆ ನಡೆಸಿ ಈ ಹಿಂದೆ ಇದ್ದ ಹಳೆ ಮನೆ ಬಿದ್ದು ಹೋಗಿ, ಪಕ್ಕದಲ್ಲಿ ಶ್ರೀಮತಿ ಸುನಂದ ರವರು ಹೊಸ ಮನೆ ಕಟ್ಟಿರುತ್ತಾರೆಂದು ಕಂಡು ಬಂದಿದ್ದರಿಂದ, ದೂರುದಾರರಿಗೆ ಸರ್ವೇ ನಂಬರ್ 255ರ ಜಮೀನಿನ ಅಳತೆ ಮಾಡಿಸಿದ ನಕ್ಷೆಯನ್ನು ಹಾಜರುಪಡಿಸಲು ತಿಳಿಸಿರುವುದು

Sd/-

ಕಂಡು ಬರುತ್ತದೆ. ಆದ್ದರಿಂದ, ಈ ಬಗ್ಗೆ ಪಂಚಾಯತಿಯಲ್ಲಿ ನಿರ್ಣಯ ಕೈಗೊಂಡು, ದೂರುದಾರರಿಗೆ ಇದನ್ನು ತಿಳಿಸಿರುವುದು ಸಹ ಕಂಡು ಬರುತ್ತದೆ.

5. ಇದಲ್ಲದೇ, ದೂರುದಾರರು ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಉಡುಪಿ ಇಲ್ಲಿ ಖಾಸಗಿ ದೂರೊಂದನ್ನು ಸಲ್ಲಿಸಿ, ತನ್ನ ಪತ್ನಿ ಶ್ರೀಮತಿ ಸುನಂದ ಇವರು ಸುಳ್ಳು ಮಾಹಿತಿಯನ್ನು ನೀಡಿ ಆಸ್ತಿಯನ್ನು ಲಪಟಾಯಿಸಿರುತ್ತಾರೆಂದು ದೂರು ನೀಡಿದ್ದು, ಅದು ಪಿಸಿ ನಂಬರ್ 256/2001 ಆಗಿದ್ದು, ಅದರಲ್ಲಿ ತನಿಖೆಯನ್ನು ಹಿರಿಯಡ್ಕದ ಪೊಲೀಸ್‌ನವರಿಗೆ ವಹಿಸಿದ್ದು, ಸದರಿಯವರು ತನಿಖೆ ನಿರ್ವಹಿಸಿ ಶ್ರೀಮತಿ ಸುನಂದ ರವರು ಯಾವುದೇ ರೀತಿಯ ಸುಳ್ಳು ಮಾಹಿತಿಯನ್ನು ನೀಡಿರುವುದಿಲ್ಲವೆಂದು, ದೂರುದಾರರು ಶ್ರೀಮತಿ ಸುನಂದ ರವರಿಗೆ ತಾನು 2ನೇ ಮದುವೆ ಆದ ನಂತರ ಕಿರುಕುಳ ನೀಡುತ್ತಿದ್ದು, ನಂತರ 1 ತಿಂಗಳು ಮನೆಗೆ ಬರದೇ ಇದ್ದಾಗ ಶ್ರೀಮತಿ ಸುನಂದ ರವರು ತಮ್ಮ ಪತಿಯು ಕಾಣೆಯಾಗಿರುವ ಬಗ್ಗೆ ಪೊಲಿಸ್ ಠಾಣೆಗೆ ದೂರು ನೀಡಿದ್ದು, ನಂತರ ಮಣಿಪಾಲದ ಬಳಿ ರೈಲ್ವೆ ಹಳಿಯಲ್ಲಿ ಅಪರಿಚಿತ ಶವ ದೊರೆತ ಮಾಹಿತಿ ಮೇರೆಗೆ ಶ್ರೀಮತಿ ಸುನಂದ ರವರು ಶವವನ್ನು ನೋಡಿ ಅದು ತನ್ನ ಪತಿಯೆಂದು ಹೋಲುತ್ತಿದ್ದ ಕಾರಣ, ತನ್ನ ಪತಿಯೇ ಶವವೆಂದು ನಂಬಿರುತ್ತಾರೆ. ಈ ಬಗ್ಗೆ ಸಾಕ್ಷಿಗಳನ್ನು ವಿಚಾರಣೆ ಮಾಡಲಾಗಿ, ಸದರಿಯವರುಗಳು ಸಹ ಅದೇ ರೀತಿ ಹೇಳಿಕೆ ನೀಡಿರುತ್ತಾರೆಂದು ತಿಳಿಸಿ ಅಂತಿಮ ವರದಿಯನ್ನು ಪೊಲೀಸ್‌ನವರು ನ್ಯಾಯಾಲಯಕ್ಕೆ ತಿಳಿಸಿರುವುದು ಕಂಡು ಬರುತ್ತದೆ.

6. ದೂರುದಾರರು ಆಪಾದಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಿರಿಯಡ್ಕ ಪೊಲೀಸ್ ಠಾಣೆ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇಲ್ಲಿ ಅಪರಾಧ ಸಂಖ್ಯೆ: 64/2011ರ ಪ್ರಕರಣವು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಮೃತ ವ್ಯಕ್ತಿಯ ದೇಹವನ್ನು ಪ್ರಕರಣದ ದೂರುದಾರರ ಪತ್ನಿ ಇವರು ತನ್ನ ಪತಿಯ ಮೃತ ದೇಹವೆಂದು ಗುರುತಿಸಿ, ಸದರಿ ಮೃತ ದೇಹವನ್ನು ತನ್ನ ಸುಪರ್ದಿಗೆ ಪಡೆದು, ಸದರಿ ಮೃತ ದೇಹವನ್ನು ಕಸ್ತೂರಿಬಾ ಮೆಡಿಕಲ್ ಕಾಲೇಜಿಗೆ ವಹಿಸಿಕೊಟ್ಟಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿರುವ ಕಾರಣ, ಸದರಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಲಾಗಿದ್ದು, ಅದರಂತೆ, ಹಿರಿಯಡ್ಕ ಪೊಲೀಸ್ ಠಾಣೆಯ ಈಗಿನ ಪೊಲೀಸ್ ಉಪನಿರೀಕ್ಷಕರು ಯುಡಿಆರ್ ನಂಬರ್ 28/09ರ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಲ್ಲಿ ದೂರುದಾರರ ಪತ್ನಿ ಶ್ರೀಮತಿ ಸುನಂದ ಇವರು ಸ್ವಇಚ್ಛೆ ಮೇರೆಗೆ ಮೃತ ದೇಹವನ್ನು ಮುಖ್ಯಸ್ಥರು, ಅಂಗ ರಚನಾ ಶಾಸ್ತ್ರ ವಿಭಾಗ, ಕೆ.ಎಂ.ಸಿ., ಮಣಿಪಾಲ್ ಇವರಿಗೆ ಸಾಕ್ಷಿದಾರರ ಸಮಕ್ಷಮ ವಹಿಸಿಕೊಟ್ಟಿರುವ ಬಗ್ಗೆ ದಿ:06/11/2009 ರ ಪತ್ರದಿಂದ ಕಂಡು ಬರುತ್ತದೆ.

7. ಕಡತ ಪರಿಶೀಲಿಸಲಾಗಿ 2ನೇ ಎದುರುದಾರರವರ ವಿರುದ್ಧ ತನಿಖೆ ಕೈಬಿಡಲಾಗಿರುತ್ತದೆ.

8. ದೂರಿನ ಆರೋಪಗಳು 2ನೇ ಎದುರುದಾರರು 2009ರಲ್ಲಿ ಅಪಘಾತದಲ್ಲಿ ಮರಣ ಹೊಂದಿದ ಯಾವುದೋ ಹೆಣವನ್ನು ತೋರಿಸಿ ದೂರುದಾರರು ಮರಣ ಹೊಂದಿರುತ್ತಾರೆಂದು ದಾಖಲೆ ನೀಡಿ ಮರಣ ಪ್ರಮಾಣ ಪತ್ರ ಪಡೆದು ಪೆರ್ಡೂರು ಪಂಚಾಯತಿಗೆ ಅರ್ಜಿ ಸಲ್ಲಿಸಿ ಡೋರ್ ನಂ.2–44ಸಿ ಫಿರ್ಯಾದಿಯ ಹೆಸರಿನಲ್ಲಿರುವ ಮನೆಯನ್ನು 2ನೇ ಎದುರುದಾರರು ತನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ. ಅರ್ಜಿಯೊಂದಿಗೆ ಸುಳ್ಳು ಒಪ್ಪಿಗೆ ಪತ್ರ ಸಲ್ಲಿಸಿದ್ದು, ಒಪ್ಪಿಗೆ ಪತ್ರದಲ್ಲಿರುವ ಸಾಕ್ಷಿಗಳು ಕಾಲ್ಪನಿಕ ವ್ಯಕ್ತಿಗಳೆಂದು, 1ನೇ ಎದುರುದಾರರವರು ಖಾತೆ ಬದಲಾವಣೆಗೆ ಸಹಕರಿಸಿರುತ್ತಾರೆಂದು. 1ನೇ ಎದುರುದಾರರವರ ವಿರುದ್ಧ ಕ್ರಮ ಜರುಗಿಸಲು ಹಾಗೂ ಮನೆಯನ್ನು ತನ್ನ ಹೆಸರಿಗೆ ಮಾಡಿಕೊಡಲು ಕೋರಿ ಪ್ರಸ್ತುತ ದೂರು ಸಲ್ಲಿಸಿರುತ್ತಾರೆ.

9. 1ನೇ ಎದುರುದಾರರವರು ತಮ್ಮ ಆಕ್ಷೇಪಣೆಯಲ್ಲಿ ಮನೆಯ ಖಾತೆಯನ್ನು 2ನೇ ಎದುರುದಾರರವರ ಹೆಸರಿಗೆ ಬದಲಾಯಿಸಲು ಕೊಟ್ಟ ಅರ್ಜಿ ಮೇರೆಗೆ ಪಂಚಾಯ್ತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಪಂಚಾಯ್ತಿ ನಿರ್ಣಯದಂತೆ ಖಾತೆ ಬದಲಾವಣೆ ಮಾಡಲಾಗಿದೆ, ಯಾವುದೇ ದುರುದ್ದೇಶವಿಲ್ಲವೆಂದು ಹೇಳಿರುತ್ತಾರೆ. ಪಿರ್ಯಾದಿಯು ಸದರಿ ಮನೆಯು ತನ್ನ ಹೆಸರಲಿತ್ತು ಎಂದು ಹೇಳಿ, ಪುನ: ತನ್ನ ಹೆಸರಿಗೆ ಖಾತೆ ಬದಲಾಯಿಸಲು ಕೋರಿ ಅರ್ಜಿ ಸಲ್ಲಿಸಿದ್ದು, ಭೂಮಾಪನಾ ಇಲಾಖೆ ನಕ್ಷೆ ನೀಡಲು ಕೋರಿದ್ದು, ಫಿರ್ಯಾದುದಾರರು ನೀಡಿಲ್ಲದ ಕಾರಣ, ಫಿರ್ಯಾದಿ ಹೆಸರಿಗೆ ಖಾತೆ ಬದಲಾಯಿಸಿಲ್ಲವೆಂದು ಹೇಳಿರುತ್ತಾರೆ.

10. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ 2ನೇ ಎದುರುದಾರರವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದು ಕಂಡು ಬರುತ್ತದೆ.

11. ಸದರಿ ಮನೆ ಖಾತೆ ಬದಲಾವಣೆಗೆ 2ನೇ ಎದುರುದಾರರವರು 1ನೇ ಎದುರುದಾರರಿಗೆ ಲಂಚ ನೀಡಿದ್ದಾಗಿ ಆರೋಪಿಸಿದ್ದು, ಈ ಬಗ್ಗೆ ಯಾವುದೇ ಆಧಾರಗಳು ಲಭ್ಯವಾಗಿರುವುದಿಲ್ಲ. ಖಾತೆ ಬದಲಾವಣೆಗೆ ನೀಡಿದ ಒಪ್ಪಿಗೆ ಪತ್ರ ನಕಲಿಯದ್ದು, ಅದರಲ್ಲಿ ನನ್ನ ಸಹಿ ಇರುವುದಿಲ್ಲ ಸಾಕ್ಷಿಗಳು ಸಹ ಖೊಟ್ಟಿ ಸಾಕ್ಷಿಗಳು ಎಂದು ಫಿರ್ಯಾದಿ ಹೇಳಿರುವ ಅಂಶಗಳು ಸಿವಿಲ್ ನ್ಯಾಯಾಲಯದ ವ್ಯಾಪ್ತಿಯಲ್ಲಿ ಇತ್ಯರ್ಥವಾಗಬೇಕಿರುತ್ತದೆ. ಮನೆ ನಂಬರ್‌ನ್ನು ಮರಳಿ ನನ್ನ ಹೆಸರಿಗೆ ವರ್ಗಾಯಿಸುವಂತೆ ಅರ್ಜಿ ನೀಡಿದ್ದು, 1ನೇ ಎದುರುದಾರರು ಪರಿಗಣಿಸಿಲ್ಲ ಎಂದು ಹೇಳಿರುತ್ತಾರೆ.

12. 1ನೇ ಎದುರುದಾರರವರ ವಿರುದ್ಧ ಮಾಡಿರುವ ಕರ್ತವ್ಯಲೋಪದ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಆಧಾರಗಳು ಲಭ್ಯವಾಗಿರುವುದಿಲ್ಲ. ಆದರೆ ಫಿರ್ಯಾದುದಾರರು ಮರಳಿ ಕಟ್ಟಡ ಸಂಖ್ಯೆ: 2–44ಸಿ ಮನೆಯ ಖಾತೆ ವರ್ಗಾವಣೆಗೆ ಕೋರಿ ಸಲ್ಲಿಸಿರುವ ಅರ್ಜಿ ಇತ್ಯರ್ಥವಾಗದೇ ಇರುವುದು ಕಂಡು ಬರುತ್ತದೆ. ಸದರಿ ಮನೆಯು ಇರುವ ಜಮೀನಿನ ಸರ್ವೆ ನಂಬರ್ 255ರ ಪಹಣಿ ಕಡತದಲ್ಲಿ ಲಭ್ಯವಿದ್ದು, ಹಾಲಿ 2ನೇ ಎದುರುದಾರರವರ ಹೆಸರಿಗಿರುವುದು ಕಂಡು ಬರುತ್ತದೆ.

13. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆ, ಬ್ರಹ್ಮಾವರ ಹೋಬಳಿ ಪೆರ್ಡೂರು ಗ್ರಾಮದ ಸರ್ವೇ ನಂಬರ್ 255 ರಲ್ಲಿ ಇರುವ ಕಟ್ಟಡ ಸಂ:2–44ಸಿ ಮತ್ತು ಜಮೀನಿನ ಖಾತೆಯನ್ನು ಮೊದಲು ಇದ್ದಂತೆ ಫಿರ್ಯಾದಿ ಹೆಸರಿಗೆ ಬದಲಾವಣೆ ಮಾಡಲು ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

30/11/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**